## ಸಂಶೋಧನೆ | ಸಿ.ಪಿ.ಸಿ.ಆರ್.ಐ.ಯಲ್ಲಿ ಕೊಕ್ಕೋ ಅಂತಾರಾಷ್ಟ್ರೀಯ ಕಾರ್ಯಾಗಾರ

# ಬೀಜ ಗುಣಮಟ್ಟ ಹೆಚ್ಚಳದತ್ತ ಯತ್ನ: ಡಾ| ವೆಂಕಟೇಶ್

**ಕುಂಬಳೆ,** ಮೇ 21: ಕಾಸರಗೋಡಿನ ಸಿ.ಪಿ.ಸಿ.ಆರ್.ಐ.ಯಲ್ಲಿ ಆಯೋಜಿಸಿದ ಏಷ್ಯಾ ಮತ್ತು ಪೆಸಿಫಿಕ್ ಖಂಡಗಳ ಕೊಕ್ಕೋ ತಳಿ ಸಂಶೋಧಕರ ಒಂದು ವಾರದ ಕಾರ್ಯಾಗಾರವನ್ನು ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ| ಎನ್. ಕುಮಾರ್ ಉದ್ಘಾಟಿಸಿ ಮಾತನಾಡಿ ಹೆಚ್ಚು ಇಳುವರಿ ನೀಡುವ ಹಾಗೂ ರೋಗ, ಕೀಟ ಪ್ರತಿರೋಧಕ ಹೈಬ್ರಿಡ್‌ಗಳ ಉತ್ಪಾದನೆಯ ಹಾಗೂ ಪರಸ್ಪರ ದೇಶಗಳ ಮಧ್ಯೆ ಇವುಗಳ ವಿನಿಮಯದ ಮೂಲಕ ಕೃಷಿಕರ ವಿತರಣೆಗಾಗಿ ಸ್ಥಳೀಯ ಗಿಡ ಉತ್ಪಾದನೆಯ ಪ್ರಾಮುಖ್ಯವನ್ನು ವಿವರಿಸಿದರು.




ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು.

ಗೇರು ಮತ್ತು ಕೊಕ್ಕೋ ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.| ವೆಂಕಟೇಶ್ ಹುಬ್ಬಳ್ಳಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಅಂತಾರಾಷ್ಟ್ರೀಯ ಸಹಭಾಗಿಗಳ ಗಮನಕ್ಕೆ ಭಾರತದ ಕೊಕ್ಕೋ ಬೀಜದ ಗುಣಮಟ್ಟ ಅತ್ಯುತ್ತಮವಾಗಿದ್ದರೂ, ಸಂಸ್ಕರಣಾ ರೀತಿಯ ಹೆಚ್ಚಳ ಅವಶ್ಯಕವಿದ್ದು, ಕೃಷಿಕರ ತರಬೇತಿಯ ಮೂಲಕ ಸಂಸ್ಕರಿಸಲ್ಪಟ್ಟ ಬೀಜದ ಗುಣಮಟ್ಟವನ್ನೂ ಉತ್ತಮಪಡಿಸಲಾಗುತ್ತಿದೆ ಎಂದರು.

ಮಾರ್ಸ್ ಚಾಕೊಲೇಟ್‌ನ ತಳಿ ಸಂಶೋಧನಾ ಪ್ರಬಂಧಕಿ ಡಾ| ಸ್ಮಿಲ್ಲಾ ಲಾಂಬರ್ಟ್ ಏಷ್ಯಾ ಮತ್ತು ಪೆಸಿಫಿಕ್ ಖಂಡಗಳ ಕೊಕ್ಕೋ ತಳಿ ಸಂಶೋಧಕರ ಚಟುವಟಿಕೆಗಳ ಕುರಿತು ಕಾರ್ಯಾಗಾರದಲ್ಲಿ ವಿವರಿಸಿದರು.

ಕ್ಯಾಂಪ್ಕೋ ಉಪಾಧ್ಯಕ್ಷ ಶಂಕರನಾರಾಯಣ ಭಟ್ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಕ್ಯಾಂಪ್ಕೋ ಕಾರ್ಯ ಚಟುವಟಿಕೆಗಳ ಕುರಿತು ಕಾರ್ಯಾಗಾರದ ಶಿಬಿರಾರ್ಥಿಗಳಿಗೆ ತಿಳಿಯಪಡಿಸಿದರು.

ಪಾಮ್ಸ್ ಸಂಶೋಧನಾ ಪ್ರಾಜೆಕ್ಟ್ ಸಂಯೋಜಕ ಡಾ| ಎಚ್.ಪಿ. ಮಹೇಶ್ವರಪ್ಪ ಹಾಗೂ ಆಂಧ್ರ ತೋಟಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ| ಜೆ. ದಿಲೀಪ್ ಬಾಬು ಶುಭಾಶಂಸನೆಗೈದರು.

ಕಾರ್ಯಾಗಾರದಲ್ಲಿ ಕೇರಳ ಕೃಷಿ ವಿಶ್ವವಿದ್ಯಾನಿಲಯ, ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯ, ಹಾಗೂ ಆಂಧ್ರ ತೋಟಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧಕರು, ಆಸ್ಟ್ರೇಲಿಯಾ, ಇಂಡೋನೇಷ್ಯಾ, ಮಲೇಶ್ಯಾ, ಫಿಲಿಪೈನ್ಸ್ ವಿಯೆಟ್ನಾಂ, ಅಮೆರಿಕಾ, ಬೆಲ್ಜಿಯಂ, ದೇಶಗಳಿಂದ 13 ಹಾಗೂ ಸಿ.ಪಿ.ಸಿ.ಆರ್.ಐ.ಯ ವಿಜ್ಞಾನಿಗಳು ಭಾಗವಹಿಸುತ್ತಿರುವರು.

ಕಾರ್ಯಕ್ರಮದಲ್ಲಿ ಭೌಗೋಳಿಕವಾಗಿ ಕೊಕ್ಕೋ ವಲಯದ ಸಾಮರ್ಥ್ಯ ಹಾಗೂ ದೌರ್ಬಲ್ಯಗಳ ಮೌಲ್ಯಮಾಪನಕ್ಕಾಗಿ ವಿವಿಧ ದೇಶಗಳ ಪ್ರಸ್ತುತ ಕಾರ್ಯಕ್ರಮಗಳ ಅವಲೋಕನ, ಕೊಕ್ಕೋಗೆ ಈಗ ಬಾಧಿಸುತ್ತಿರುವ ಕೀಟ ರೋಗಗಳ ವಿವರಣೆ ಹಾಗೂ ಮುಂಬರುವ ಹವಾಮಾನದ ಏರುಪೇರಿನಿಂದ ರೋಗ ಕೀಟ ಬಾಧೆಯಿಂದ ಸಂರಕ್ಷಣೆಗೆ ರೂಪುರೇಷೆಗಳ ತಯಾರಿ, ಸಾಮಾಜಿಕ ಹಾಗೂ ಆರ್ಥಿಕ ಸವಲತ್ತುಗಳು, ಉತ್ಪಾದನೆ, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ ಸ್ತರದಲ್ಲಿ ಕಾರ್ಯವೈಖರಿ, ಸಂಶೋಧನಾ ಒಡಂಬಡಿಕೆಯ ಸಾಧ್ಯತೆಗಳು ಹಾಗೂ ಭಾರತದಲ್ಲಿ ಹೆಚ್ಚುವರಿ ಪರಿಶೀಲನೆಗಳ ಪ್ರಾರಂಭ ಇವುಗಳ ಕುರಿತಾದ ಚರ್ಚೆ, ಹಾಗೂ ವಿಟ್ಲ ಸಿ.ಪಿ.ಸಿ.ಆರ್.ಐ.ಯ ಸಂಶೋಧನಾ ಕ್ಷೇತ್ರ, ಕಿದು ಸಿ.ಪಿ.ಸಿ.ಆರ್.ಐ.ಯ ಕೃಷಿ ಕ್ಷೇತ್ರ ಹಾಗೂ ಕ್ಯಾಂಪ್ಕೋ ಸಂಸ್ಕರಣ ಕ್ಷೇತ್ರಗಳಿಗೆ ಭೇಟಿ ಆಯೋಜಿಸಲಾಗಿದೆ.